# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ರತ್ನ ಪರೀಕ್ಷೆ – ೨೦೧೩

**ಪ್ರಶ್ನೆಪತ್ರಿಕೆ – ೧**

## ಹಳಗನ್ನಡ ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**೧. ಈ ಪದ್ಯದ ಭಾವಾರ್ಥ ಬರೆಯಿರಿ.** ೧೦

ಎಲೆ ವನಸ್ಥಳಗಳಿರ ವೃಕ್ಷಂಗಳಿರ ಮೃಗಂ ।
ಗಳಿರ ಕ್ರಿಮಿಕೀಟಂಗಳಿರ ಪಕ್ಷಿಗಳಿರ ಲತೆ ।
ಗಳಿರ ತೃಣಗುಲ್ಮಂಗಳಿರ ಪಂಚಭೂತಂಗಳಿರ ದೆಸೆಗಳಿರ ಕಾವುದು ॥
ಎಲೆ ಧರ್ಮದೇವತೆ ಜಗಜ್ಜನನಿ ಜಾಹ್ನವಿಯೆ ।
ಸಲಹಿಕೊಳ್ಳುವುದು ತನ್ನ ಮಾತೆಯಂ ಜಾನಕಿಯ ।
ನೆಲೆತಾಯೆ ಭೂದೇವಿ ನಿನ್ನ ಮಗಳಿಹಳೆಂದು ಸೌಮಿತ್ರಿ ಕೈಮುಗಿದನು ॥

**೨. ಐದನ್ನು ಕುರಿತು ಸಂಕ್ಷಿಪ್ತ ಉತ್ತರ ಬರೆಯಿರಿ.** ೨೫

ಅ) ಹಲ್ಮಿಡಿ ಶಾಸನದಲ್ಲಿರುವ 'ಬಾಳ್ಗಚ್ಚು, ಪತ್ತೊನ್ದಿ'ಯನ್ನು ವಿವರಿಸಿ.

ಆ) ಏನಂ ಪೇಳ್ವೆಂ ಮಗನೆ ನಿನಗೆ ತಂದೆಯಪ್ಪಾತನೆನಗಂ – ತಂದೆ.

ಇ) ನೀಲಾಂಜನೆಯ ನೃತ್ಯ ಪ್ರವೇಶವನ್ನು ವಿವರಿಸಿ.

ಈ) ಕಣ್ಣಪ್ಪನ ರಗಳೆಯಲ್ಲಿ ಪಾರ್ವನ ಪೂಜೆ.

ಉ) 'ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ'.

ಊ) ದುಶ್ಶಾಸನನು ದ್ರೌಪತಿಯನ್ನು ಸಭಾಂಗಣಕ್ಕೆ ಎಳೆದು ತರುವ ಪ್ರಸಂಗವನ್ನು ವಿವರಿಸಿ.

ಋ) ಕುಸುಮಾಜಿ ಮತ್ತು ಭರತನ ನಡುವಿನ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.

ಎ) ಸೀತೆಯ ಅಳಲು ಲಕ್ಷ್ಮಣನ ಮೇಲೆ ಯಾವ ಪರಿಣಾಮವನ್ನು ಉಂಟು ಮಾಡುತ್ತದೆ?

(ಪು.ತಿ.ನೋ.)



**೩. ಮೂರನ್ನು ಕುರಿತು ಟಿಪ್ಪಣಿ ಬರೆಯಿರಿ.** ೧೫

ಅ) ಅಗ್ನಿರಾಜ

ಆ) ಹರಿಹರ

ಇ) ರತ್ನಾಕರವರ್ಣಿ

ಈ) ಮೊದಲನೇ ನಾಗವರ್ಮ

ಉ) ರಾಘವಾಂಕ

**೪. ಹತ್ತು ಪದಗಳಿಗೆ ಅರ್ಥ ಬರೆಯಿರಿ.** ೧೦

| | |
|---|---|
| ಅ) ಆರೋಗಣೆ | ಋ) ಹಾರುವ |
| ಆ) ಅಂಘ್ರಿ | ಎ) ದರ್ಪಕ |
| ಇ) ಕೇತನ | ಏ) ನೊಸಲು |
| ಈ) ದ್ಯೂತ | ಐ) ಪುಳಿಂದ |
| ಉ) ವಹ್ನಿ | ಒ) ಬೇಡ |
| ಊ) ಅಭ್ರಗಜ | ಓ) ಉರ |

**೫. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** ೪೦

ಅ) 'ರಾಜರ ಅಸ್ತಿಸಂಬಂಧಿ ಮತ್ತು ಕಾಮಸಂಬಂಧಿ ವಿಚಾರಗಳು ಕೌಟುಂಬಿಕ ವಿಘಟನೆ ಮತ್ತು ಸಾಮ್ರಾಜ್ಯನಾಶಕ್ಕೂ ಕಾರಣವಾಗುತ್ತವೆ' ಕಾರ್ತಿಕ ಋಷಿಯ ಕತೆ ಹಿನ್ನೆಲೆಯಲ್ಲಿ ಚರ್ಚಿಸಿ.

ಆ) ಪಂಪನ ಆದಿಪುರಾಣದಲ್ಲಿ ಅಮರನರ್ತಕಿ ನೀಲಾಂಜನೆಯ ನೃತ್ಯ ಪ್ರಸಂಗವೇ ಅತ್ಯಂತ ಕಾವ್ಯಾತ್ಮಕ ಭಾಗ – ವಿವರಿಸಿ.

ಇ) ಬೇಡರ ಕಣ್ಣಪ್ಪನ ರಗಳೆಯಲ್ಲಿನ ಮುಗ್ಧ ಮತ್ತು ಡಾಂಬಿಕ ಭಕ್ತಿಯನ್ನು ವಿವರಿಸಿ.

ಈ) ಅಮೃತಮತಿ ಬದಗನಿಗೆ ಮನಸೋಲುವ ಪ್ರಸಂಗವನ್ನು ಚಿತ್ರಿಸಿ.

ಉ) ಮೊಸಳೆಯಂ ಕಪಿ ಕೊಂದ ಕತೆಯಲ್ಲಿನ ಕಥಾತಂತ್ರ, ವಿಡಂಬನೆ, ಶಿಕ್ಷಣ, ನೀತಿಗಳನ್ನು ಚರ್ಚಿಸಿ.

ಊ) ಮಹಾಶ್ವೇತೆ – ಪುಂಡರೀಕರ ಪ್ರೇಮ ವಿರಹವನ್ನು 'ನಿನ್ನಂತೆ ವಿಗತಚಿತ್ತರುಮೊಳರೆ' ಕಾವ್ಯಭಾಗದ ಹಿನ್ನೆಲೆಯಲ್ಲಿ ಚರ್ಚಿಸಿ.

****

Created by demo-version of Universal Document Converter. Full version doesn't add this stamp. WWW.PRINT-DRIVER.COM

# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ರತ್ನ ಪರೀಕ್ಷೆ – ೨೦೧೩

**ಪ್ರಶ್ನೆಪತ್ರಿಕೆ – ೨**

## ಹೊಸಗನ್ನಡ ಸಾಹಿತ್ಯ (ಕಾವ್ಯ ಮತ್ತು ಸಣ್ಣಕತೆ)

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I. ಒಂದರ ಭಾವಾರ್ಥ ಬರೆಯಿರಿ.** **೦೫**

೧) ನೀರಡಸಿ ಬಂದ ಸೋದರಗೆ ನೀರನು ಕೊಡಲು
ಮನುಧರ್ಮಶಾಸ್ತ್ರವನೆಗೊರೆಯಬೇಕೇನು?
ನೊಂದವನ ಕಂಬನಿಯನೊರಸಿ ಸಂತೈಸುವಡೆ
ಶಾಸ್ತ್ರ ಪ್ರಮಾಣವದಕಿರಲೆ ಬೇಕೇನು?

೨) ಗಾಂಧಿ ಚರಕದೊಳಗೆ
ಅಪ್ಪ ನೂಲಾಗಿ ಸೇರಿದ್ದು
ನನಗೆ ಅಪ್ಪನಲಿ ಗಾಂಧಿ ಅವತರಿಸಿ
ನಿಂದದ್ದು ಕಂಡಿದ್ದು ಉಂಡಿದ್ದು
ದಿಟವಾಗಿ ಸಟೆಯಲ್ಲ.

**II. ನಾಲ್ಕಕ್ಕೆ ಸಂದರ್ಭ ಸಹಿತ ವಿವರಿಸಿ.** **೧೨**

೧) ಮರಳು, ಮರಳು ಮಗಳೆ ಎಂದ
೨) ಅವ್ವನ ಕೈಗಿಷ್ಟು ನೀರನು ಹಾಕು
೩) ಆಚೆಗೇನಿದೆ? ಏನಿದೆ? ದೊರೆ ಕೇಳಿದ
೪) ಕಲಿತು ಅರ್ಥೈಸುತ್ತ ಬದುಕಿ ಬಂದ
೫) ವರ್ಷಗಳ ಹಿಂದೆ ಇದೇ ಬೀದಿಗಳಲ್ಲಿ ನಡೆದಿದ್ದ ಹೀಗೆ
೬) ಕಲ್ಲು ಮಾಡಿಕೋ ಹೃದಯ

**III. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** **೦೮**

| | |
|---|---|
| ೧) ಪಂಜೆ ಮಂಗೇಶರಾಯರು | ೪) ಮುಂಬೈ ಜಾತಕ |
| ೨) ಕುವೆಂಪು | ೫) ತಿರುವನಂತಪುರ |
| ೩) ಹೆಚ್.ಎಸ್. ಶಿವಪ್ರಕಾಶ್ | ೬) ಕದ್ದರೆಂದು |

(ಪು.ತಿ.ನೋ.)



**IV. ಐದು ಪ್ರಶ್ನೆಗಳಿಗೆ ಉತ್ತರಿಸಿ.** **೨೫**

೧) 'ಕಾರಿ ಹೆಗ್ಗಡೆಯ ಮಗಳು' ಕವಿತೆಯಲ್ಲಿ ಅಭಿವ್ಯಕ್ತವಾಗಿರುವ ಪ್ರೇಮದ ಸ್ವರೂಪವನ್ನು ವಿವರಿಸಿ.

೨) 'ಕಣಿವೆಯ ಮುದುಕ' ಕವಿತೆಯಲ್ಲಿ ವ್ಯಕ್ತಗೊಂಡಿರುವ ನೋವನ್ನು ವಿವರಿಸಿ.

೩) 'ಕನ್ನಡ ಪದಗೊಳ್' ಪದ್ಯದಲ್ಲಿನ ಕನ್ನಡ ಪ್ರೇಮ ಯಾವ ಬಗೆಯದು?

೪) 'ಯೋಧ ಮತ್ತು ಹೆಂಗಸು' ಕವಿತೆಯಲ್ಲಿ ಸಾಮಾನ್ಯ ಹೆಣ್ಣೊಬ್ಬಳು ಪಂಪನೊಂದಿಗೆ ಮುಖಾಮುಖಿಯಾಗುವ ಸನ್ನಿವೇಶದ ಸ್ವಾರಸ್ಯವನ್ನು ನಿರೂಪಿಸಿ.

೫) ಲಂಕೇಶರ 'ಅವ್ವ' ಯಾವ ಬಗೆಯವಳು ಪರಿಚಯಿಸಿ.

೬) 'ಗಂಗಾ ಮಾಯಿ' ಇದು ಜಡಗೊಂಡ ಬದುಕಿನ ಸಂಕೇತ – ಚರ್ಚಿಸಿ.

೭) ಗಿಡುಗ ಮತ್ತು ಎರೆಹುಳ, ಕೊನೆಯ ಹಾಡು, ನನ್ನ ತಾಯಿ ಈ ಕವಿತೆಗಳಲ್ಲಿ ಒಂದನ್ನು ಕುರಿತು ಬರೆಯಿರಿ.

**V. ಒಂದು ಪ್ರಶ್ನೆಗೆ ಉತ್ತರಿಸಿ.** **೧೦**

೧) 'ಹುತ್ತರಿ ಹಾಡು' ಕವಿತೆಯು ಕೊಡವರ ಬದುಕಿನ ವೈಶಿಷ್ಟ್ಯವನ್ನು ಯಾವ ರೀತಿ ಕಟ್ಟಿಕೊಡುತ್ತದೆ ವಿವರಿಸಿ.

೨) 'ಮದಲಿಂಗನ ಕಣಿವೆ' ಕವಿತೆಯಲ್ಲಿ ಸರಸದಲ್ಲಿ ಆರಂಭವಾದ ಮಾತು ದುರಂತದಲ್ಲಿ ಕೊನೆಯಾಗುವ ಪರಿಯನ್ನು ಪರಿಶೀಲಿಸಿ.

### ಭಾಗ – ೨

**I. ಕೆಳಗಿನವುಗಳಲ್ಲಿ ಎರಡು ಪ್ರಶ್ನೆಗಳಿಗೆ ಉತ್ತರಿಸಿ.** **೨೦**

೧) ಭಗ್ನಪ್ರೇಮಿಯಾಗಿ ವೆಂಕಟಸ್ವಾಮಿ ದೊಂಬರ ಹುಡುಗಿಯ ಕೊರಗಿನಲ್ಲಿ ಪ್ರಾಣಬಿಡುವ ಬಗೆಯನ್ನು ವಿವರಿಸಿ.

೨) 'ಮಾರಿಕೊಂಡವರು' ಕತೆಯಲ್ಲಿ ಬಡತನದ ಬೇಗೆಯ ಚಿತ್ರಣ ಹೇಗೆ ಮೂಡಿ ಬಂದಿದೆ?

೩) 'ಗಾಂಧಿ' ಕತೆಯಲ್ಲಿ ಬರುವ 'ಗಾಂಧಿ' ಹೆಸರು ಹೇಗೆ ವಿಡಂಬನೆಗೆ ಒಳಗಾಗಿದೆ?

೪) 'ಕಸಬರಿಕೆ' ಕತೆಯಲ್ಲಿ ಬಂದಿರುವ ತುಳುನಾಡಿನ ಚಿಂತನೆಗಳನ್ನು ವಿವರಿಸಿ.

೫) 'ಚೇಳು' ಕತೆಯಲ್ಲಿ ಕಥಾನಾಯಕಿ ಚೇಳುಗಳ ಸಾಮ್ರಾಜ್ಯದಲ್ಲಿ ಸಿಕ್ಕಿ ಹಾಕಿಕೊಳ್ಳುವುದು ಹೇಗೆ ಸಾಂಕೇತಿಕವಾಗಿದೆ?

Created by demo-version of Universal Document Converter. Full version doesn't add this stamp. WWW.PRINT-DRIVER.COM

**II. ಎರಡಕ್ಕೆ ಟಿಪ್ಪಣಿ ಬರೆಯಿರಿ.** ೧೦

| | |
|---|---|
| ೧) ಬಾನು ಮುಷ್ತಾಕ್ | ೪) ಸಿದ್ದೇಗೌಡ |
| ೨) ಮಾಸ್ತಿ ವೆಂಕಟೇಶ ಅಯ್ಯಂಗಾರ್ | ೫) ಜೇನು ಹುಡುಗಿ |
| ೩) ಯಶವಂತ ಚಿತ್ತಾಲ | ೬) ವೆಂಕಮ್ಮ |

**III. ಎರಡಕ್ಕೆ ಸಂದರ್ಭ ಸಹಿತ ವಿವರಿಸಿ.** ೧೦

೧) "ಅಣ್ಣೋ ಅದೇ ನನ್ನಿಡಕಂಡುಬುಟ್ಟದೆ, ಸ್ವಲ್ಪ ಕಿತ್ತಾಕು"

೨) "ಏನೋ ಅಯ್ಯಾ, ದೇವರಿಗೇ ಗೊತ್ತು"

೩) ನಾವೀಗ ತರಲು ಹೊರಟಿದ್ದು ಹೆಣ್ಣುಮಗುವನ್ನೋ ಗಂಡುಮಗುವನ್ನೋ

೪) " ಹೇ ಅಲ್ಲಾ ......... ನೀನೇ ಆದಿ ............. ನೀನೇ ಅಂತ್ಯ"

೫) ಯಾಕವ್ವಾ ನಿಂಗೀಗ ಸುಡುಗಾಡಿನ ಯೋಚನೆ?

***



# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ರತ್ನ ಪರೀಕ್ಷೆ – ೨೦೧೩

**ಪ್ರಶ್ನೆಪತ್ರಿಕೆ – ೩**

## ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ

[ ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**ಭಾಗ – ೧**

**I. ಎರಡು ಪುಟಗಳಿಗೆ ಕಡಿಮೆ ಇಲ್ಲದಂತೆ ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** ೩೦

೧. 'ಸಹಿತತೆಯಿಂದ ಸಾಹಿತ್ಯ' ಈ ಹೇಳಿಕೆಯನ್ನು ವಿವರಿಸಿ.

೨. ನವರಸಗಳನ್ನು ಉದಾಹರಣೆ ಸಹಿತ ನಿರೂಪಿಸಿ.

೩. 'ಕವಿ ಸಮಯ' ದ ಸ್ವರೂಪವನ್ನು ತಿಳಿಸಿಕೊಡಿ.

**II ಎಂಟಕ್ಕೆ ಟಿಪ್ಪಣಿ ಬರೆಯಿರಿ.** ೪೦

| | |
|---|---|
| ೧) ನಾಟ್ಯಶಾಸ್ತ್ರ | ೨) ಚಿತ್ತವೃತ್ತಿಗಳು |
| ೩) ಅಲಂಕಾರ ಶಾಸ್ತ್ರ | ೪) ಆನಂದವರ್ಧನ |
| ೫) ಅರಿಸ್ಟಾಟಲ್ | ೬) ಕೃತಿನಿಷ್ಠ ವಿಮರ್ಶೆ |
| ೭) ಜೋನಥನ್ ಕಲರ್ | ೮) ಲಾಂಗ್ ಮತ್ತು ಪರೋಲ್ |
| ೯) ಆದರ್ಶ ಓದುಗ | ೧೦) ಔಚಿತ್ಯ |

**III ಇವುಗಳಲ್ಲಿ ಐದಕ್ಕೆ ಒಂದು ಪುಟಕ್ಕೆ ಕಡಿಮೆ ಇರದಂತೆ ಉತ್ತರಿಸಿ.** ೩೦

೧) ಡಿವಿಜಿ ಅಭಿಪ್ರಾಯದಂತೆ ಕಾವ್ಯಾದಿಗ್ರಂಥ ನಿರ್ಮಿತಿಗೆ ಆವಶ್ಯಕ ಮೂಲ ಕಾರಣಗಳು ಯಾವುವು?

೨) 'ರಸನಿಷ್ಪತ್ತಿ' ಎಂದರೇನು? ವಿವರಿಸಿ.

೩) ವಿಮರ್ಶೆ ಎಂದರೇನು? ಚರ್ಚಿಸಿ.

೪) 'ಧ್ವನಿತತ್ವ'ದ ಪರಿಚಯ ಮಾಡಿಕೊಡಿ.

೫) ಭಾರತೀಯ ಮತ್ತು ಪಾಶ್ಚಿಮಾತ್ಯ ಕಾವ್ಯಮೀಮಾಂಸೆಗಳ ನಡುವಿನ ಸಾಮ್ಯತೆಯನ್ನು ಗುರುತಿಸಿ.

೬) ಲಾಂಗಿನಸ್‌ನ 'ಸಬ್ಲೈಮ್' (ಮಹೋನ್ನತಿ) ಸಿದ್ಧಾಂತದ ಬಗ್ಗೆ ಬರೆಯಿರಿ.

೭) ಕಾವ್ಯಕ್ಕೂ ವೇದಾಂತಕ್ಕೂ ಪರಿಣಾಮದಲ್ಲಿ ಸಂಬಂಧವಿದೆಯೇ? ವಿಚಾರಮಾಡಿ.

****

Created by demo-version of Universal Document Converter. Full version doesn't add this stamp. www.PRINT-DRIVER.COM

# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

**ಕನ್ನಡ ರತ್ನ ಪರೀಕ್ಷೆ – ೨೦೧೩**

**ಪ್ರಶ್ನೆಪತ್ರಿಕೆ – ೪**

**ಭಾಷೆ ರಚನೆ ಬಳಕೆ**

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** ೨೦

೧) ಭಾಷಾವಿಜ್ಞಾನದ ಐದು ಐತಿಹಾಸಿಕ ತಿರುವುಗಳನ್ನು ಪರಿಚಯಿಸಿ.

೨) ಭಾಷಾಯೋಜಕನ ಆಸಕ್ತಿ ಹೇಗಿರುತ್ತದೆ?

೩) ಶಿಷ್ಟಭಾಷೆ ಹೇಗೆ ರೂಪುಗೊಳ್ಳುತ್ತದೆ?

೪) ಅನ್ಯಭಾಷಾ ಶಿಕ್ಷಣ ಮಾಧ್ಯಮವನ್ನು ಅವಲಂಬಿಸುವುದು ಹೇಗೆ ಮೂರ್ಖತನವೆನಿಸಿಕೊಳ್ಳುತ್ತದೆ?

೫) ಕನ್ನಡದಲ್ಲಿ ಉಪಭಾಷೆಗಳನ್ನು ಗುರುತಿಸುವುದು ಹೇಗೆ?

೬) ಶಿಷ್ಟಭಾಷೆಯ ಸ್ವರೂಪವೇನು?

**II. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** ೩೦

೭) ಶೈಲಿವಿಜ್ಞಾನ ಮತ್ತು ಕ್ಷೇತ್ರ ಭಾಷಾವಿಜ್ಞಾನಗಳನ್ನು ವಿಶ್ಲೇಷಿಸಿ

೮) ಸಾಂಪ್ರದಾಯಿಕ ವ್ಯಾಕರಣ ಎಂದರೇನು? ನಿದರ್ಶನಗಳೊಂದಿಗೆ ವಿವರಿಸಿ.

೯) ಪದಪುಂಜ ರಚನಾ ನಿಯಮಗಳನ್ನು ಕುರಿತು ಬರೆಯಿರಿ.

೧೦) 'ಮಂಡ್ಯ ಕನ್ನಡ' ಆ ಪ್ರದೇಶದ ಜನರ ಸಂಸ್ಕೃತಿ ಆಚಾರ–ವಿಚಾರಗಳನ್ನು ಅಭಿವ್ಯಕ್ತಿಸುವ ಬಗೆಯನ್ನು ನಿದರ್ಶನಗಳೊಂದಿಗೆ ನಿರೂಪಿಸಿ.

(ಪು.ತಿ.ನೋ.)



**III ಯಾವುದಾದರೂ ಎರಡು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ.** ೩೦

೧೧) ಭಾಷಾವಿಜ್ಞಾನದ ಈಚಿನ ಪ್ರವೃತ್ತಿಗಳೇನು? ವಿವರಿಸಿ

೧೨) ಕನ್ನಡ ಭಾಷಾಸಂಶೋಧನೆಯ ಮೂರು ಮುಖ್ಯ ನೆಲೆಗಳು ಯಾವುವು? ನಿದರ್ಶನಗಳೊಂದಿಗೆ ವಿಶ್ಲೇಷಿಸಿ.

೧೩) ಕನ್ನಡದ ಪ್ರಾಂತಭೇದ ಮತ್ತು ಅವಸ್ಥಾಂತರಗಳನ್ನು ಕುರಿತು ಬರೆಯಿರಿ.

೧೪) ಕನ್ನಡ ಭಾಷೆಯ ಏಕೀಕರಣ ಎಂದರೇನು? ಅದು ಎಷ್ಟರಮಟ್ಟಿಗೆ ಸಾಧಿತವಾಗಿದೆ? ಇನ್ನೂ ಆಗಬೇಕಾದ್ದೇನು? ವಿಶದಪಡಿಸಿ.

**IV. ಯಾವುದಾದರೂ ಐದು ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ.** ೨೦

೧೫) ಜನಪದ ಭಾಷಾವಿಜ್ಞಾನ

೧೬) ಲಿಪಿ ಪರಿಷ್ಕರಣಕ್ಕೆ ಬಿ.ಎಂ.ಶ್ರೀಕಂಠಯ್ಯನವರ ಕೊಡುಗೆ

೧೭) ವ್ಯಾಕರಣದ ಬಗೆಗಿನ ತಪ್ಪುಗ್ರಹಿಕೆಗಳು

೧೮) ಕನ್ನಡ ಭಾಷೆಯಲ್ಲಿ ಐತಿಹಾಸಿಕ ಸಂಶೋಧನೆ

೧೯) ಭಾಷಾ ರಚನೆಯಲ್ಲಿ ಪದಗಳು

೨೦) ಮೈಸೂರು ಕನ್ನಡ

೨೧) ಅಂಬೇಡ್ಕರ್ ಅವರ ಸಣ್ಣರಾಜ್ಯಗಳ ಕಲ್ಪನೆ

***

Created by demo-version of Universal Document Converter. Full version doesn't add this stamp. WWW.PRINT-DRIVER.COM

# ಕನ್ನಡ ಸಾಹಿತ್ಯ ಪರಿಷತ್ತು

## ಬೆಂಗಳೂರು – ೧೮

## ಕನ್ನಡ ರತ್ನ ಪರೀಕ್ಷೆ – ೨೦೧೩

### ಪ್ರಶ್ನೆಪತ್ರಿಕೆ – ೫

### ಜಾನಪದ ಸ್ವರೂಪ – ಕನ್ನಡ ಸಂಸ್ಕೃತಿ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**'ಎ' ಭಾಗ**

**I. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ.** ೪೦

೧. ಜಾನಪದ ಅಧ್ಯಯನದ ಉದ್ದೇಶ ಮತ್ತು ಪ್ರಯೋಜನಗಳನ್ನು ವಿವರಿಸಿ.

೨. ಜಾನಪದ ಅಧ್ಯಯನದಲ್ಲಿ ಕ್ಷೇತ್ರಕಾರ್ಯಕ್ಕಿರುವ ಮಹತ್ವವನ್ನು ವಿಶದಪಡಿಸಿ.

೩. 'ಜಾನಪದ ನಿಂತ ನೀರಲ್ಲ, ಚಲನಶೀಲವಾದುದು' ಎಂಬುದನ್ನು ಉದಾಹರಣೆ ಸಹಿತ ನಿರೂಪಿಸಿ.

೪. 'ಗಾದೆ ಒಳಗೊಳ್ಳದ ಕ್ಷೇತ್ರವಿಲ್ಲ' ಎಂಬುದನ್ನು ಉದಾಹರಣೆಗಳ ಸಹಿತ ನಿರೂಪಿಸಿ.

೫. 'ಜನಪದ ಗೀತೆ'ಗಳಲ್ಲಿ ಸಾಂಸ್ಕೃತಿಕ ಮೌಲ್ಯಗಳು ಹೇಗೆ ಬಣ್ಣಿಸಲ್ಪಟ್ಟಿವೆ ಎಂಬುದನ್ನು ಸೋದಾಹರಣವಾಗಿ ನಿರೂಪಿಸಿ.

೬. ಒಗಟುಗಳು ಜನಪದರ ಬುದ್ಧಿಶಕ್ತಿಯ ಪ್ರತೀಕ – ಈ ಹೇಳಿಕೆಯನ್ನು ಉದಾಹರಣೆಗಳೊಂದಿಗೆ ವಿಶ್ಲೇಷಿಸಿ.

೭. ಜಾನಪದವನ್ನು ಕುರಿತು ವಿವಿಧ ವಿದ್ವಾಂಸರು ನೀಡಿರುವ ವ್ಯಾಖ್ಯೆಗಳನ್ನು ವಿಶ್ಲೇಷಿಸಿ.





**II. ಕೆಳಗಿನವುಗಳಲ್ಲಿ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೧೦

ಅ. ಜನಪದ ಗೀತೆ

ಆ. ಸಿ.ಎಫ್. ಪಾಟರ್

ಇ. ಜಾನಪದ ಲೋಕ

ಈ. ಸೋಬಾನೆ ಪದಗಳು

ಉ. ಜನಪದ – ಜಾನಪದ

ಊ. ವೃತ್ತಿಗಾಯಕರು

**'ಬಿ' ಭಾಗ**

**III. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ.** ೪೦

೧. ಸಂಸ್ಕೃತಿ ಎಂದರೇನು? ಕನ್ನಡ ಸಂಸ್ಕೃತಿಯ ವೈಶಿಷ್ಟ್ಯವನ್ನು ಪರಿಚಯಿಸಿ.

೨. ಜನಪದ ಸಂಸ್ಕೃತಿಯ ಸೊಗಸನ್ನು ಪರಿಚಯಿಸಿ.

೩. ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಕನ್ನಡ ಸಂಸ್ಕೃತಿಯನ್ನು ವಿಶ್ಲೇಷಿಸಿ.

೪. ಕರ್ನಾಟಕದ ಧಾರ್ಮಿಕ ಸಂಸ್ಕೃತಿಯನ್ನು ಪರಿಚಯಿಸಿ.

೫. ನಾಟ್ಯ ಸಂಸ್ಕೃತಿಯ ಹೆಜ್ಜೆ ಗುರುತುಗಳನ್ನು ಪರಿಚಯ ಮಾಡಿಕೊಡಿ.

೬. ಹೊಯ್ಸಳರ ವಾಸ್ತುಶಿಲ್ಪದ ವೈಶಿಷ್ಟ್ಯಗಳನ್ನು ವಿವರಿಸಿ.

೭. ಕನ್ನಡ ನಾಡಿನ ಚಿತ್ರಕಲೆಯ ಇತಿಹಾಸವನ್ನು ವಿವರಿಸಿ.

**IV. ಕೆಳಗಿನವುಗಳಲ್ಲಿ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೧೦

ಅ. ರಾಷ್ಟ್ರಕೂಟರು

ಆ. ಹಲ್ಮಿಡಿ ಶಾಸನ

ಇ. ಮಾಸ್ತಿಕಲ್ಲು

ಈ. ಪುರಂದರದಾಸರು

ಉ. ಚಾಲುಕ್ಯರು

ಊ. ಯಕ್ಷಗಾನ

***

Created by demo-version of Universal Document Converter. Full version doesn't add this stamp. WWW.PRINT-DRIVER.COM